# ನವಿಲುಗನ್ನಡಿ

- ತಾಜುದ್ದೀನ್ ಆಜಾದ್ ಅವರು ತೆಗೆದ ಚಿತ್ರದ ಮುಖಪುಟ ಹೊತ್ತ ಅಕ್ಟೋಬರ್ ಮಯೂರ ಸರ್ವಾಂಗ ಸುಂದರವಾಗಿ ಮೂಡಿಬಂದಿದೆ. 'ಕಥೆಗಳ ಜಂಬೂಸವಾರಿ' ಶೀರ್ಷಿಕೆಗೆ ಹೊಂದಿಕೆಯಾಗುವಂತೆ ಮೂರು ಜಿಂಕೆಗಳೂ ಜಂಬೂಸವಾರಿ ಹೊರಟಂತಿವೆ. ಆಕರ್ಷಕ ವರ್ಣವಿನ್ಯಾಸ ಸಂತಸ ತಂದಿತು.

**ನಾರಾಯಣ ರೈ ಕುಕ್ಕುವಳ್ಳಿ, ಪುತ್ತೂರು**

- ಶತಮಾನದ ನಮನದಲ್ಲಿ ಶಾಂತರಸ ಮೈದಾಳಿ ಶಾಂತರಸರಾಗಿ... ಲೇಖನ (ಮಹಾಂತೇಶ ನವಲಕಲ್) ಶಾಂತರಸರ ನೇರ, ನಿಷ್ಠುರ ವ್ಯಕ್ತಿತ್ವ ತೆರೆದಿಟ್ಟಿದೆ. 'ಬಂದವರು ಒಂದು ದಿನ ಮರಳಿ ಹೋಗಲೇಬೇಕಲ್ಲ' ಎನ್ನುವ ಅವರ ಗಜಲ್ ಸಾಲು ಅವರ ಬಾಳಿನ ನೈಜತೆಯ ಪ್ರತಿಬಿಂಬದಂತಿದೆ. ಒಟ್ಟಾರೆ ಶಾಂತರಸರು ಕನ್ನಡಿಗರ ಹೆಮ್ಮೆಯ ಹೆಮ್ಮರ!

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**

- ಮಯೂರ ಕಥೆಗಳ ಜಂಬೂಸವಾರಿ ಮುಖಪುಟ ವಿಶಿಷ್ಟವಾಗಿದೆ.. ನಾಂದಿ ಪದ ದಸರೆಗೆ ಹೊಸ ರೂಪದ ಒನಪು ವೈಯ್ಯಾರ ನೀಡಿದ ಕಥೆಗಳ ಆಗರ. ಶ್ರೀಧರ ಬಳಗಾರ, ಸುರೇಶ ಕಂಜರ್ಪಣೆ, ಕರೀಗೌಡ, ಅಬ್ದುಲ್ ರಶೀದ್ ಅವರ ಕಥೆಗಳನ್ನು ಓದುತ್ತಾ ಓದುತ್ತಾ ಮನ ಮಿಡಿಯಿತು. ಅನುಭವ ಸಾರದ ಅನುಭವ ಮಂಟಪದ ಮಯೂರದ ಪ್ರತಿ ಪುಟವೂ ನವೀನ.

**ರಾಜೇಂದ್ರ ಹೆಗಡೆ, ಹಾವೇರಿ**

- ಮೀರಾಗೆ ಗಾಂಧೀಜಿ ಬರೆದ ಪತ್ರಗಳು. ಇಂದಿನ ಕೊಳ್ಳುಬಾಕ ಮತ್ತು ಉಣ್ಣುಬಾಕ ಜೀವನಶೈಲಿಯ ಈ ದಿನಮಾನಗಳಲ್ಲಿ ಆತ್ಮಾವಲೋಕನಕ್ಕೆ ಹಚ್ಚುತ್ತವೆ. ಮಿತಾಹಾರ, ಭಗವದ್ಗೀತೆಯ ಸಾರ, ಉಪವಾಸದ ಮಹತ್ವದ ಬಗ್ಗೆ ಅನುಭವ ಹೊಂದಿ ಬರೆದಿದ್ದಾರೆ. ಮಂಜುನಾಥ ಚಾಂದ್ ಅವರಿಗೂ, ಮಯೂರ ಬಳಗಕ್ಕೂ ಧನ್ಯವಾದ

**ಮಲ್ಲಿಕಾರ್ಜುನ ಸುರಧೇನುಪುರ**

- ಅಕ್ಟೋಬರ್ ತಿಂಗಳ ಸಂಚಿಕೆಯ ಕವಿತೆ 'ಬೆರಳು ಸಂದಿನ ಭಂಡಾಸುರರು' (ಲಲಿತಾ




ಸಿದ್ಧಬಸವಯ್ಯ) ತುಂಬಾ ಚೆನ್ನಾಗಿದೆ. ಶಿವನನ್ನು ತಮ್ಮ ಲಾಲಿತ್ಯ ಶಬ್ದಗಳಿಂದ ರೂಪುಗೊಳಿಸುತ್ತಲೇ, ನವದುರ್ಗೆಯರನ್ನು ತರುವ ಪರಿ ಅನನ್ಯ. ಗಂಡಿನ ವಾಂಛಲ್ಯವನ್ನೂ, ಮೃಗೀಯತೆಯನ್ನು ಪ್ರಶ್ನಿಸುವ ನವದುರ್ಗೆಯರು ತೀರಾ ಸಹಜವಾಗಿ ಬರುತ್ತಾರೆ. ಆದರೂ ಹೆಣ್ಣು ತಾಯಿ ಹೃದಯದ ವಿಶಾಲತೆಯಲ್ಲಿ ಬೆರಳ ಸಂದುಗಳೂ ಉಂಟಲ್ಲ!

**ಬಸವರಾಜ ಕುಂಬಾರ, ಬಾಗಲಕೋಟೆ**

- 'ಮಾತು ಸೊರಗಿದ ಭಾರತ' ಸತ್ಯಾನಂದ ಪಾತ್ರೋಟ ಅವರ ಕವಿತೆ, ಪ್ರಸ್ತುತ ಭಾರತದಲ್ಲಿನ ವಾಸ್ತವ ಸಂಗತಿಯ ಪ್ರತಿಬಿಂಬವಾಗಿದೆ.

**ಎಸ್.ಆರ್.ನರಸಿಂಹ ಪ್ರಸಾದ್, ಕುಣಿಗಲ್**

- ಅಕ್ಟೋಬರ್ ತಿಂಗಳ ಮಯೂರದಲ್ಲಿ 'ಏಕ ವಚನಕಾರರು' ಪ್ರಬಂಧ (ಲಕ್ಷ್ಮಣ ಬಾದಾಮಿ) ತುಂಬಾ ಆಪ್ತವೆನಿಸಿ, ಮುದ ನೀಡಿತು. ಹಳೆಯ ನೆನಪುಗಳ ಸುಗ್ಗಿಯನ್ನೇ ಹೊತ್ತು ತಂತು. ಆ ಭಾಗದಲ್ಲೇ ವಾಸಿಸುವ ಮೂಲನಿವಾಸಿಗಳಿಗಿಂತ ನನ್ನಂಥ ಅರೆ–ಕಾಲಿಕ ಅಲ್ಲಿನ ಸೊಬಗನ್ನು ಸವಿದು ಬಂದವರಿಗೆ ಆ ಸೊಗಡು ಇನ್ನೂ ಆಪ್ತ.

**ಡಾ.ಎಸ್.ಕೆ.ಕುಮಾರ್, ಬೆಂಗಳೂರು**